ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ 183 ಇಎಸ್‌ಟಿ(7) 2022 /1394

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001.
ದಿನಾಂಕ:16-03-2022.

## ಅಧಿಕೃತ ಜ್ಞಾಪನ

ವಿಷಯ: ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ದೂರು ನಿವಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ:ಮಮಇ 58 ರಾಮಅ 2002 ದಿನಾಂಕ:28-02-2002.
2) ಭಾರತೀಯ ಸರ್ಕಾರದ ಲೈಂಗಿಕ ಕಿರುಕುಳ ಕಾಯ್ದೆ 2013.
3) ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ನಡವಳಿ ಸಂಖ್ಯೆ: ಡಿಟಿಇ 132 ಇಎಸ್‌ಟಿ(7) 2019-20 ದಿನಾಂಕ: 06-11-2019.
4) ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕಛೇರಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಿಬ್ಬಂದಿ/25/ನಾಹಜಾನಿ/2021-22 ದಿನಾಂಕ:27-12-2021.
5) ಗೌರವ ಕಾರ್ಯದರ್ಶಿ, ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಇವರ ಇ-ಮೇಲ್ ದಿನಾಂಕ:08-12-2021.

*******************

ಉಲ್ಲೇಖ(1) ಮತ್ತು (2)ರ ಸರ್ಕಾರದ ಆದೇಶದನ್ವಯ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ಉಲ್ಲೇಖ(3) ರಂತೆ ದೂರು ನಿವಾರಣಾ ಸಮಿತಿಗೆ ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರನ್ನು ಹಾಗೂ ಸರ್ಕಾರೇತರ ಸಂಸ್ಥೆಯಿಂದ ಪ್ರತಿನಿಧಿಯೊಬ್ಬರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಬೇಕಾಗಿರುತ್ತದೆ.

ಉಲ್ಲೇಖ(4)ರ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕಛೇರಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ದಿನಾಂಕ: 27-12-2021 ರಲ್ಲಿ ಪೊಲೀಸ್ ಇಲಾಖೆಯ ಮಹಿಳಾ ಅಧಿಕಾರಿಯವರನ್ನು ದೂರು ನಿವಾರಣಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡುವ ಸಂಬಂಧ ಶ್ರೀಮತಿ ಎಂ ಗೀತಾ, ಪೋಲಿಸ್ ಇನ್ಸ್ಪಕ್ಟರ್, ಡಿ.ಸಿ.ಆರ್.ಇ, ಬೆಂಗಳೂರು ಪ್ರಾದೇಶಿಕ ಕಛೇರಿ, ಬೆಂಗಳೂರು ಇವರ ಹೆಸರನ್ನು ಸೂಚಿಸಿರುತ್ತಾರೆ.

ಉಲ್ಲೇಖ(5)ರ ಗೌರವ ಕಾರ್ಯದರ್ಶಿ, ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಇವರ ಇ-ಮೇಲ್ ದಿನಾಂಕ:08-12-2021 ರಲ್ಲಿ ಶ್ರೀಮತಿ ಡಾ|| ಎಸ್.ಜಿ ಶುಶೀಲಮ್ಮ, ಅಧ್ಯಕ್ಷರು ಇವರ ಮೊಬೈಲ್ ಸಂಖ್ಯೆ 9448511898, ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಇವರ ಹೆಸರನ್ನು ಸೂಚಿಸಿರುತ್ತಾರೆ.

ಅದರಂತೆ ಉಲ್ಲೇಖ(3)ರಲ್ಲಿ ಈಗಾಗಲೇ ರಚಿಸಲಾಗಿರುವ ದೂರು ನಿವಾರಣಾ ಸಮಿತಿಗೆ ಮತ್ತಿಬ್ಬರು ಸದಸ್ಯರನ್ನು ಸೇರ್ಪಡೆಗೊಳಿಸಿ ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯಲಿರುವ ಲೈಂಗಿಕ ಕಿರುಕುಳ ತಡೆಯಲು ದೂರು ನಿವಾರಣಾ ಸಮಿತಿಗೆ ಈ ಕೆಳಕಂಡ ವಿವರದಂತೆ ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರನ್ನು ಹಾಗೂ

ಸರ್ಕಾರೇತರ ಸಂಸ್ಥೆಯಿಂದ ಪ್ರತಿನಿಧಿಯೊಬ್ಬರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಿ ಸೇರ್ಪಡೆಗೊಳಿಸಿ ಆದೇಶಿಸಲಾಗಿದೆ.

1) ಶ್ರೀಮತಿ ಎಂ ಗೀತಾ. ಪೋಲಿಸ್ ಇನ್ಸ್‌ಪೆಕ್ಟರ್. ಡಿ.ಸಿ.ಆರ್.ಇ. ಬೆಂಗಳೂರು ಪ್ರಾದೇಶಿಕ ಕಛೇರಿ. ಬೆಂಗಳೂರು.

2) ಶ್ರೀಮತಿ ಡಾ|| ಎಸ್.ಜಿ ಸುಶೀಲಮ್ಮ, (ಅಧ್ಯಕ್ಷಕರು ಇವರ ಮೊಬೈಲ್ ಸಂಖ್ಯೆ 9448511898). ಸುಮಂಗಲಿ ಸೇವಾ ಆಶ್ರಮ. ಬೆಂಗಳೂರು.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಜಂಟಿ ನಿರ್ದೇಶಕರು(ಆಡಳಿತ)

ಪ್ರತಿ ಮಾಹಿತಿಗಾಗಿ:

1) ದೂರು ನಿವಾರಣಾ ಸಮಿತಿಯ ಅಧ್ಯಕ್ಷರು(ಮೊಬೈಲ್ ಸಂಖ್ಯೆ - 9449637730) ಹಾಗೂ ಪರೀಕ್ಷಾ ಕಾರ್ಯದರ್ಶಿ(ಹೆಚ್ಚುವರಿ), ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಬೆಂಗಳೂರು.
2) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ, ಬಹುಮಹಡಿಗಳ ಕಟ್ಟಡ ಬೆಂಗಳೂರು.
3) ಸರ್ಕಾರದ ಅಪರ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಸರ್ಕಾರದ ಅಧೀನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಬಹುಮಹಡಿಗಳ ಕಟ್ಟಡ. ಬೆಂಗಳೂರು.
5) ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕಛೇರಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು.
6) ಗೌರವ ಕಾರ್ಯದರ್ಶಿ, ಸುಮಂಗಲಿ ಸೇವಾ ಆಶ್ರಮ, ಆರ್.ಟಿ.ನಗರ, ಅಮರಜ್ಯೋತಿ ಕಾಲೋನಿ. ಚೋಳನಾಯಕನಹಳ್ಳಿ ಅಂಚೆ, ಬೆಂಗಳೂರು.
7) ದೂರು ನಿವಾರಣಾ ಸಮಿತಿಯ ಎಲ್ಲಾ ಸದಸ್ಯರುಗಳಿಗೆ.
8) ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆ ಪ್ರಾಂಶುಪಾಲರುಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
9) ಇ-ಆಡಳಿತ ಘಟಕಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.